ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) —

ಅ) ಲೋಕೋಪಯೋಗಿ ಇಲಾಖೆಯು ಇತ ನೀರಾವರಿ ನಿಗಮಗಳಿಗಾಗಿ ಯಾವ ಸಿಬ್ಬಂದಿ ಯನ್ನೂ ನೇಮಕಾತಿ ಮಾಡಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪ್ರಾಥಮಿಕ ಶಾಲಾ ಶಿಕ್ಷಕರು

೨೨೮. ಶ್ರೀ ಜಿ.ಎಸ್. ಆಚಾರ್ (ಬೈಂದೂರು).— ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ ಇರುವ ವಿದ್ಯಾರ್ಥಿ ಅಧ್ಯಾಪಕರ ನಿವೃತ್ತಿಯಂತೆ ಎಷ್ಟು ಪ್ರಾಥಮಿಕ ಶಾಲಾ ಅಧ್ಯಾಪಕರ ಅವಶ್ಯಕತೆ ಇದೆ.

ಆ) ಆ ಹುದ್ದೆಗಳನ್ನು ಮಂಜೂರು ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಇ) ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು? ಯಾವಾಗಿನಿಂದ ಖಾಲಿ ಇದೆ?

ಈ) ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು) —

ಅ) ೭೮೧ ಹೆಚ್ಚುವರಿ ಶಿಕ್ಷಕರ ಅವಶ್ಯಕತೆ ಇದೆ.

ಆ) ಈ ಬಗ್ಗೆ ಪ್ರಸ್ತಾವನೆಯೊಂದು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ೯೦. ಈ ಹುದ್ದೆಗಳು ಒಂದು ವರ್ಷದಿಂದ ಖಾಲಿ ಇದೆ.

ಈ) ಈಗಾಗಲೇ ನೇಮಕಾತಿ ಮಾಡುವ ವಿಷಯವು ಪ್ರಗತಿಯಲ್ಲಿದೆ.

ತಂಬಾಕು ಬೆಳೆಗಾರರಿಗೆ ವಿಮಾ ಯೋಜನೆ

೧೭೧ ಶ್ರೀ ಕೆ. ಪಿ. ಮಂಗೆಣ್ಣನವರ್ (ಸದಲಗಾ).— ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ತಂಬಾಕು ಬೆಳೆಯುವ ಭಾಗವಾದ ಬೆಳಗಾವಿ ಜಿಲ್ಲೆಯ ರೈತರು ಪ್ರತಿ ವರ್ಷವು ಮಳೆಯಿಲ್ಲದ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ಆಕಸ್ಮಾತ್ ಮಳೆಯಾಗಿ ಕೋಟ್ಯಾಂತರ ರೂಪಾಯಿ ತಂಬಾಕು ತೋಯ್ದು ಹಾನಿಯಾಗುತ್ತಿರುವುದು ನಿಜವೇ ?

ಇ) ಹಾಗಿದ್ದಲ್ಲಿ, ಜರೂರಾಗಿ ಬೆಳೆ ವಿಮೆ ಯೋಜನೆ ಅಡಿಯಲ್ಲಿ ರೈತರಿಗೆ ಅನುಕೂಲ ಮಾಡಿ ಕೊಡಲು ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳುವುದೇ ?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ಪ್ರತಿ ವರ್ಷವು ಮಳೆಯಿಲ್ಲದೆ ತೊಂದರೆ ಪಡುತ್ತಿಲ್ಲ.

ಆ) ೧೯೮೫-೮೬ ಹಾಗೂ ೧೯೮೬-೮೭ರಲ್ಲಿ ಸ್ವಲ್ಪ ಮಟ್ಟಿನ ಹಾನಿಯಾಗಿರುತ್ತದೆ.

ಇ) ಸಮಗ್ರ ಬೆಳೆ ವಿಮೆ ಯೋಜನೆ ಅಡಿಯಲ್ಲಿ ತಂಬಾಕು ಬೆಳೆ ಸೇರಿರುವುದಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ.